# ನಿಮ್ಮೊಡನೆ

## ಹೊಸ ರೂಪಗಳಲ್ಲಿ ಜೀತಪದ್ಧತಿ! ಕೊನೆಯೆಂದು? ಪರಿಹಾರ ಹೇಗೆ?

ನಮ್ಮೆಲ್ಲ ಅಭಿವೃದ್ಧಿ ಮೀಮಾಂಸೆಗಳು, ಸಾಮಾಜಿಕ ನ್ಯಾಯದ ಸಂಕಥನಗಳು ಹಾಗೂ ಮಾನವೀಯತೆಯ ಪರಿಭಾಷೆಗಳನ್ನು ಅಣಕಿಸುವಂತೆ ಬೆಂಗಳೂರು ಮಹಾನಗರದಲ್ಲೇ ಜೀತಪದ್ಧತಿ ಜೀವಂತವಾಗಿರುವ ವರದಿಗಳು ಪ್ರಕಟವಾಗಿವೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರತಿ ವರ್ಷ ಸರಾಸರಿ 150 ಜೀತದಾಳುಗಳನ್ನು ಸರ್ಕಾರ ರಕ್ಷಿಸುತ್ತಿದೆ ಎನ್ನುವ ಅಂಕಿಅಂಶ 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎನ್ನುವ ಮಾತು ಘೋಷಣೆಯ ರೂಪದಲ್ಲಷ್ಟೇ ಉಳಿದಿರುವುದನ್ನು ಸೂಚಿಸುವಂತಿದೆ.

ನಾಡಿನ ಯಾವುದೋ ಮೂಲೆಯ ತೋಟದಲ್ಲೋ ಕಲ್ಲು ಕ್ವಾರಿಯಲ್ಲೋ ಜನರನ್ನು ಕೈಕಾಲು ಕಟ್ಟಿ ಅಮಾನವೀಯವಾಗಿ ದುಡಿಸುತ್ತಿದ್ದ ಘಟನೆಗಳು ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ ಸಾಕಷ್ಟಿವೆ. ಅಭಿವೃದ್ಧಿಯ ನಾಗಾಲೋಟದಲ್ಲಿ ಜೀತಪದ್ಧತಿ ನಿರ್ಮೂಲನೆಗೊಂಡಿದೆ ಎನ್ನುವ ನಂಬಿಕೆ ವ್ಯಾಪಕವಾಗಿರುವಾಗ, ರಾಜಧಾನಿ ಹಾಗೂ ಅದರ ಸುತ್ತಮುತ್ತಲೇ ಜೀತ ಪ್ರಕರಣಗಳು ವರದಿಯಾಗಿವೆ. ಜೀತಪದ್ಧತಿ ಎಂದಾಕ್ಷಣ ಕೈಕಾಲಿಗೆ ಸರಪಣಿ ಬಿಗಿಸಿಕೊಂಡ ಕಾರ್ಮಿಕರ ಚಿತ್ರಗಳು ನೆನಪಾಗುತ್ತವೆ. ಆದರೆ, 1976ರ ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ, ಜೀತವನ್ನು ಸ್ವಾತಂತ್ರ್ಯಹರಣದ ರೂಪದಲ್ಲಿ ವ್ಯಾಖ್ಯಾನಿಸಿದೆ. ಸಾಲದ ಕಾರಣದಿಂದಾಗಿ ಅಥವಾ ಬೇರಾವುದೋ ಅನಿವಾರ್ಯತೆಯಿಂದಾಗಿ ವ್ಯಕ್ತಿಯೊಬ್ಬ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ದುಡಿಯುವ ಪರಿಸ್ಥಿತಿಯಿದ್ದರೆ ಅದನ್ನು ಜೀತ ಎಂದು ಪರಿಗಣಿಸಲಾಗುತ್ತಿದೆ. ಒಂದಷ್ಟು ಹಣವನ್ನು ಮುಂಗಡ ನೀಡಿ, ಆ ಹಣವನ್ನು ತೀರಿಸುವ ರೂಪದಲ್ಲಿ ಕಾರ್ಮಿಕರನ್ನು ಪಶುಗಳಂತೆ ದುಡಿಸಿಕೊಳ್ಳುವವರು ಸಾಕಷ್ಟಿದ್ದಾರೆ. ನಿರ್ದಿಷ್ಟ ವೇತನವಿಲ್ಲದೆ, ಸಮಯದ ಪರಿವೆಯಿಲ್ಲದೆ ದುಡಿಯುವ ಕಾರ್ಮಿಕರು ನಗರದ ಸುತ್ತಮುತ್ತಲಿನ ಇಟ್ಟಿಗೆಗೂಡು, ಕಲ್ಲಿನ ಕ್ವಾರಿಗಳಲ್ಲಿ ಕಾಣಸಿಗುತ್ತಾರೆ.

ಮಹಾನಗರದ ಬೆಳವಣಿಗೆಯೊಂದಿಗೆ ಜೀತಪದ್ಧತಿ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದೊಂದಿಗೆ ಬಿಹಾರ, ಉತ್ತರಪ್ರದೇಶ, ಒಡಿಶಾ, ಆಂಧ್ರಗಳಿಂದ ದೊಡ್ಡ ಸಂಖ್ಯೆಯ ಜನ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬರುತ್ತಿದ್ದಾರೆ. ಇವರೆಲ್ಲ ತಂಬಾಕು ಉತ್ಪನ್ನ ಕೈಗಾರಿಕೆಗಳಲ್ಲಿ, ಕಟ್ಟಡ ನಿರ್ಮಾಣಗಳಲ್ಲಿ, ಹೋಟೆಲ್‌ಗಳು ಸೇರಿದಂತೆ ಬೇರೆ ಬೇರೆ ಶ್ರಮದಾಯಕ ಉದ್ದಿಮೆಗಳಲ್ಲಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಮಾನವ ಕಳ್ಳಸಾಗಣೆಗೊಳಗಾಗಿ ನಗರಕ್ಕೆ ಬರುವವರು ಜೀತದಾಳುಗಳಾಗುತ್ತಿದ್ದಾರೆ. ಅನೇಕ ಗಾರ್ಮೆಂಟ್‌ಗಳಲ್ಲಿ ದುಡಿಯುವ ಹೆಣ್ಣುಮಕ್ಕಳ ಪರಿಸ್ಥಿತಿ ಕೂಡ ಜೀತದ ಆಧುನಿಕ ರೂಪವೇ ಆಗಿದೆ. ಹೆಣ್ಣುಮಕ್ಕಳ ಲೈಂಗಿಕ ಶೋಷಣೆ ಈ ವ್ಯವಸ್ಥೆಯಲ್ಲಿ ಅತ್ಯಂತ ಸಹಜವಾದುದು ಎನ್ನುವಂತೆ ನಡೆಯುತ್ತದೆ. ಬೆಂಗಳೂರಿನ ಹೆಸರಘಟ್ಟಕ್ಕೆ ಸಮೀಪದ ಕೊಂಡಶೆಟ್ಟಿಹಳ್ಳಿ ಗ್ರಾಮದ ಇಟ್ಟಿಗೆ ತಯಾರಿಕೆ ಘಟಕದಲ್ಲಿ ದುಡಿಯುತ್ತಿದ್ದ ಒಡಿಶಾದ 41 ಮಕ್ಕಳು ಮತ್ತು 163 ಕಾರ್ಮಿಕರನ್ನು ಕಳೆದ ವಾರವಷ್ಟೇ ರಕ್ಷಿಸಲಾಗಿದೆ. ದಿನಕ್ಕೆ 15 ತಾಸು ದುಡಿಯುತ್ತಿದ್ದ ಇವರಿಗೆ ದೊರೆಯುತ್ತಿದ್ದ ದಿನಗೂಲಿ ನೂರು ರೂಪಾಯಿ ಮಾತ್ರವೆನ್ನುವುದು ಆಧುನಿಕ ಜೀತದ ಕರಾಳಮುಖಕ್ಕೆ ಉದಾಹರಣೆಯಂತಿದೆ. ದುಡಿದರಷ್ಟೇ ಸಂಪಾದನೆ ಎನ್ನುವಂತಿರುವ ಈ ಕಾರ್ಮಿಕರಿಗೆ ವಾರದ ರಜೆ, ಕೆಲಸ ಸ್ಥಳದಲ್ಲಿ ಇರಬೇಕಾದ ಮೂಲಭೂತ ಸವಲತ್ತುಗಳ ಬಗ್ಗೆ ಅರಿವೇ ಇಲ್ಲ.

ಸರ್ಕಾರದಿಂದ ರಕ್ಷಣೆಗೊಳಗಾದ ಸಂತ್ರಸ್ತರಿಗೆ ತಕ್ಷಣದ ಸವಲತ್ತುಗಳಿಗಾಗಿ 20 ಸಾವಿರ ರೂಪಾಯಿ ದೊರೆಯಲಿದೆ. ನಂತರದ ದಿನಗಳಲ್ಲಿ ಅವರಿಗೆ ಸರ್ಕಾರವೇ ಪುನರ್ವಸತಿ ಕಲ್ಪಿಸಿಕೊಡಲಿದೆ. ಆದರೆ, ಸರ್ಕಾರದಿಂದ ಪ್ರತಿ ವರ್ಷ ರಕ್ಷಣೆಗೊಳಗಾಗುವ ಸಂತ್ರಸ್ತರ ಹಲವು ಪಟ್ಟು ಜನ ನರಕಕೂಪಗಳಲ್ಲಿ ನರಳುತ್ತಲೇ ಇದ್ದಾರೆ. ಗಿರಣಿಗಳು, ಅಗರಬತ್ತಿ ಕೈಗಾರಿಕೆಗಳು, ಚರ್ಮೋತ್ಪನ್ನಗಳ ಕೈಗಾರಿಕೆಗಳು, ಲಾರಿಗಳು – ಇಲ್ಲೆಲ್ಲ ದೊಡ್ಡ ಸಂಖ್ಯೆಯ ಕಾರ್ಮಿಕರು ಕನಿಷ್ಠ ಕೂಲಿಯಿಲ್ಲದೆ, ಜೀವಕ್ಕೆ ರಕ್ಷಣೆಯಿಲ್ಲದೆ ದುಡಿಯುತ್ತಿದ್ದಾರೆ. ಇವರಲ್ಲಿ ಬಹುತೇಕರಿಗೆ ಸ್ವಾತಂತ್ರ್ಯದ ಪರಿಕಲ್ಪನೆಯೂ ಇಲ್ಲ. ಜೀತಪದ್ಧತಿ ಜೀವಂತವಾಗಿರುವುದಕ್ಕೆ ಕಾನೂನಿನ ಅನುಷ್ಠಾನದಲ್ಲಿರುವ ಲೋಪ ಪ್ರಮುಖ ಕಾರಣವಾಗಿದೆ. ಬೆದರಿಕೆ, ಆಮಿಷ, ವಂಚನೆಗಳ ಮೂಲಕ ವ್ಯಕ್ತಿಗಳನ್ನು ಸ್ಥಳಾಂತರಿಸುವುದು ಮಾನವ ಕಳ್ಳಸಾಗಣೆಯಾಗುತ್ತದೆ. ಈ ಮಾನವ ಕಳ್ಳಸಾಗಣೆ ಜಾಮೀನುರಹಿತ ಅಪರಾಧವಾಗಿದ್ದು, ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಬಹುದಾಗಿದೆ. ಜೀತಕ್ಕೆ ದುಡಿಸಿಕೊಳ್ಳುವವರಿಗೆ 7 ವರ್ಷಗಳ ಕಾಲ ಜೈಲುಶಿಕ್ಷೆಯಿದೆ. ಇವೆಲ್ಲ ಶಿಕ್ಷೆಗಳು ಕಾರ್ಯರೂಪಕ್ಕೆ ಬಂದಿರುವ ಉದಾಹರಣೆಗಳು ಕಡಿಮೆಯಾದುದರಿಂದಲೇ, ಜೀತ ಜೀವಂತವಾಗಿದೆ, ಕಾರ್ಮಿಕರ ಶೋಷಣೆ ನಮ್ಮ ಸುತ್ತಮುತ್ತಲೇ ನಡೆದಿದೆ.

ನತದೃಷ್ಟರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವುದು ಸರ್ಕಾರಕ್ಕೆ ಸುಲಭದ ಕೆಲಸವೂ ಅಲ್ಲ. ರಕ್ಷಣೆಗೊಳಗಾಗಿ ಊರಿಗೆ ಮರಳುವ ಕಾರ್ಮಿಕರು, ಒಂದಷ್ಟು ಸಮಯದ ನಂತರ ಮತ್ತೆ ಜೀತದ ಪಾಲಾಗುವುದೂ ಇದೆ. ಸಮಾಜ ತಳಹಂತದಿಂದ ಆರ್ಥಿಕವಾಗಿ ಬಲಗೊಂಡಾಗಷ್ಟೇ ಜೀತ ಕೊನೆಗೊಳ್ಳಲು ಸಾಧ್ಯ.

■ ರಘುನಾಥ ಚ.ಹ.

ಅಭಿವೃದ್ಧಿಯ ನಾಗಾಲೋಟದಲ್ಲಿ ಜೀತಪದ್ಧತಿ ನಿರ್ಮೂಲನೆಗೊಂಡಿದೆ ಎನ್ನುವ ನಂಬಿಕೆ ವ್ಯಾಪಕವಾಗಿರುವಾಗ, ರಾಜಧಾನಿ ಸುತ್ತಮುತ್ತಲೇ ಜೀತ ಪ್ರಕರಣಗಳು ವರದಿಯಾಗಿವೆ. ಮಹಾನಗರದ ಬೆಳವಣಿಗೆಯೊಂದಿಗೆ ಜೀತಪದ್ಧತಿ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ.



ಈಶ್ವರ್